For more information visit University Library Website
Web - uasbagrilibindia.org
E-mail- librarian@uasbangalore.edu.in

ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿಕೆ | ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವ

ಕೃಷಿಯಲ್ಲಿ ಡಿಜಿಟಲ್ ತಂತ್ರಜ್ಞಾನಕ್ಕೆ ಆದ್ಯತೆ ಸಿಗಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೃಷಿ ಕ್ಷೇತ್ರದಲ್ಲಿ ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವಲ್ಲಿ ಭಾರತವು ಮುಂಚೂಣಿಯಲ್ಲಿದ್ದು, ಪ್ರಸ್ತುತ ಸನ್ನಿವೇಶದಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಲು ಹೆಚ್ಚಿನ ಆದ್ಯತೆ ಸಿಗಬೇಕಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಗುರುವಾರ ಆಯೋಜಿಸಿದ್ದ 59ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು. ಡ್ರೋನ್ ತಂತ್ರಜ್ಞಾನ, ಉಪಗ್ರಹ ಚಿತ್ರಣ ಮತ್ತು ಸ್ಮಾರ್ಟ್ ನೀರಾವರಿ ವ್ಯವಸ್ಥೆಗಳ ಬಳಕೆಯು ಉತ್ಪಾದನೆ ಹೆಚ್ಚಿಸಲು ಮತ್ತು ನೀರಿನ ಬಳಕೆ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಮೇಲೆ ರೈತರ ಅವಲಂಬನೆ ಕಡಿಮೆ ಮಾಡುವ ಅವಶ್ಯಕತೆಯಿದೆ. ಸಾವಯವ ಕೃಷಿ, ನೈಸರ್ಗಿಕ ಕೃಷಿ, ಕಡಿಮೆ ನೀರಿನಿಂದ ಹೆಚ್ಚಿನ ಇಳುವರಿ ಮತ್ತು ಸುರಕ್ಷಿತ ಆಹಾರ ಉತ್ಪಾದಿಸಲು ಪರಿಸರಸ್ನೇಹಿ ಕೃಷಿಯಂತಹ ಪದ್ಧತಿಗಳನ್ನು ಉತ್ತೇಜಿಸಲು ರೈತರಿಗೆ ಮನವರಿಕೆ ಮಾಡಿಕೊಡಬೇಕಿದೆ ಎಂದು ಕಿವಿಮಾತು ಹೇಳಿದರು.

■ **ಕೃಷಿ ಹೊಂಡಗಳ ನಿರ್ಮಾಣಕ್ಕೆ 235 ಕೋಟಿ ರೂ. ಬಿಡುಗಡೆ**

ಲಂಬ ಕೃಷಿ ತಂತ್ರಜ್ಞಾನದತ್ತ ಲಕ್ಷ್ಯ ಅಗತ್ಯ: ಪ್ರಸ್ತುತ ಜಾಗತಿಕ ತಾಪಮಾನ, ನೀರಿನ ಬಿಕ್ಕಟ್ಟು, ಮಣ್ಣಿನ ಸವಕಳಿ ಮತ್ತು ರೈತರ ಆರ್ಥಿಕ ತೊಂದರೆಗಳಂತಹ ಸವಾಲು ಎದುರಿಸುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಪದವೀಧರರು, ಕೃಷಿ ವಿಜ್ಞಾನಿಗಳು ಮತ್ತು ನೀತಿ- ನಿರೂಪಕರ ಪಾತ್ರ ಹೆಚ್ಚು ಮುಖ್ಯವಾಗಿದೆ. ಕೃಷಿ ಉತ್ಪಾದನೆಯ ಬೇಡಿಕೆ ಪೂರೈಸಲು ಹೊಸ ಆಯ್ಕೆಗಳನ್ನು ಉತ್ತೇಜಿಸುವ ಅವಶ್ಯಕತೆಯಿದೆ. ಕಡಿಮೆ ಭೂಮಿಯಲ್ಲಿ ಹೆಚ್ಚು ಇಳುವರಿ ಬೆಳೆಯುವ ಲಂಬ ಕೃಷಿ ತಂತ್ರಜ್ಞಾನದಲ್ಲಿ ಗುರುತರವಾದ ಕೆಲಸ ಆಗಬೇಕಿದೆ ಎಂದು ಗೆಹಲೋತ್ ಹೇಳಿದರು.

ಯುವಜನತೆ ಸ್ಟಾರ್ಟಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ್ ಭಾರತ್‌ನಂತಹ ಯೋಜನೆಗಳ ಸದುಪಯೊಗಪಡೆಸಿಕೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು. ಕೃಷಿ ಆಧಾರಿತ ಸ್ಟಾರ್ಟ್‌ಅಪ್‌ಗಳು ಭಾರತದ ಆರ್ಥಿಕತೆಗೆ ಅಧಿಕ ಬಲ ನೀಡಲಿರುವ ಕಾರಣ ಸಾವಯವ ಉತ್ಪನ್ನಗಳ ಮಾರ್ಕೆಟಿಂಗ್, ಫಾರ್ಮ್-ಟು-ಮಾರ್ಕೆಟ್ ಮಾದರಿ, ಕೋಲ್ಡ್ ಚೈನ್ ಮ್ಯಾನೇಜ್‌ಮೆಂಟ್ ಮತ್ತು ಕೃಷಿ-ಪ್ರವಾಸೋದ್ಯಮದಂತಹ ಕ್ಷೇತ್ರಗಳಲ್ಲಿ ಯುವಕರು ಕೆಲಸ ಮಾಡಬೇಕಾಗಿದೆ ಎಂದು ರಾಜ್ಯಪಾಲರು ವಿವರಿಸಿದರು.

ಹನಿ ನೀರಾವರಿಗೆ 1,075 ಕೋಟಿ ರೂ. ನೆರವು: ಕೃಷಿ ಸಚಿವ ಚಲುವರಾಯಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಕೃಷಿ ಉತ್ಪಾದನೆ ಹೆಚ್ಚಿಸಲು ಸರ್ಕಾರವು ಕಳೆದೆರಡು ವರ್ಷದಲ್ಲಿ 1,075 ಕೋಟಿ ರೂ. ಅನ್ನು ಹನಿ ನೀರಾವರಿಗೆ ಸಹಾಯಧನವಾಗಿ ನೀಡಿದೆ. ಕಟಾವು ಹಾಗೂ ಸಂಸ್ಕರಣೆ ಯಂತ್ರೋಪಕರಣಗಳಿಗೆ 900 ಕೋಟಿ ರೂ., ಕೋಯ್ಲೋತ್ತರ ತಂತ್ರಜ್ಞಾನ ಬಳಕೆಗೆ 'ಹಾರ್ವೆಸ್ಟರ್ ಹಬ್' ಯೋಜನೆ ಅಡಿ 344 ಹಾರ್ವೆಷ್ಟರ್‌ಗಳನ್ನು ವಿತರಿಸಲಾಗಿದೆ. ಕೃಷಿ ಹೊಂಡ ನಿರ್ಮಾಣಕ್ಕೆ 235 ಕೋಟಿ ರೂ. ಬಿಡುಗಡೆ ಮಾಡಿದ್ದು, ಈ ಎಲ್ಲ ಕಾರ್ಯಕ್ರಮಗಳ ರೈತರಿಗೆ ಅನುಕೂಲ ಕಲ್ಪಿಸಿದೆ ಎಂದರು.

ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ನಾರಾಯಣಸ್ವಾಮಿ, ಆಡಳಿತ ಮಂಡಳಿ ಸದಸ್ಯರು ಮತ್ತು ವಿವಿ ಅಧ್ಯಾಪಕ ವರ್ಗದವರು ಹಾಜರಿದ್ದರು.



ವಿಜಯವಾಣಿ ಚಿತ್ರಗಳು

ಬೆಂಗಳೂರು ಕೃವಿ ವಿವಿಯ 59ನೇ ಘಟಿಕೋತ್ಸವದಲ್ಲಿ ವಿ. ಬಾಲಸುಬ್ರಮಣಿಯನ್ ಹಾಗೂ ಯೋಗೇಂದ್ರಕುಮಾರ್‌ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಸಚಿವ ಚಲುವರಾಯಸ್ವಾಮಿ, ಕುಲಪತಿ ಡಾ. ಎಸ್.ವಿ.ಸುರೇಶ್ ಇದ್ದರು.

1271 ವಿದ್ಯಾರ್ಥಿಗಳಿಗೆ ಪದವಿ, 150 ಚಿನ್ನದ ಪದಕ ಪ್ರದಾನ

2023-24ನೇ ಶೈಕ್ಷಣಿಕ ವರ್ಷದಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ತೇರ್ಗಡೆ ಹೊಂದಿರುವ ಒಟ್ಟು 1,271 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದೇ ವೇಳೆ ಸಾಧಕ ವಿದ್ಯಾರ್ಥಿಗಳಿಗೆ 150 ಚಿನ್ನದ ಪದಕಗಳನ್ನು ವಿತರಿಸಲಾಯಿತು.



ಘಟಿಕೋತ್ಸವದಲ್ಲಿ ಅತಿಹೆಚ್ಚು ಬಂಗಾರದ ಪದಕ ಪಡೆದವರ ಸಂಭ್ರಮ.

> ಬೆಂಗಳೂರು ಕೃಷಿ ವಿವಿಯು ನ್ಯಾಕ್ ಎ ಪ್ಲಸ್ ಶ್ರೇಣಿ ಮಾನ್ಯತೆ ಪಡೆದಿರುವುದು ಶ್ಲಾಘನೀಯ. ಸಂಸ್ಥೆಯು ಶೈಕ್ಷಣಿಕ ಮಾನದಂಡವನ್ನು ಕಾಪಾಡಿಕೊಳ್ಳುವತ್ತ ಅಧ್ಯಾಪಕರ ಬದ್ಧತೆ, ರಾಷ್ಟ್ರಮಟ್ಟದ ಪರೀಕ್ಷೆಗಳು ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ನಿಯೋಜನೆಗಾಗಿ ಪ್ರಯತ್ನಿಸುವ ಪದವೀಧರರ ಯಶಸ್ಸಿನಲ್ಲಿ ಪ್ರತಿಫಲಿಸುತ್ತದೆ.
> | ಡಾ.ಯು.ಎಸ್. ಅವಸ್ಥಿ ಇಫ್ಕೋ ವ್ಯವಸ್ಥಾಪಕ ನಿರ್ದೇಶಕ

ಗೌರವ ಡಾಕ್ಟರೇಟ್ ಪ್ರದಾನ

ಘಟಿಕೋತ್ಸವದಲ್ಲಿ ಸರ್ಕಾರದ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಹಾಗೂ ಇಫ್ಕೋ ಇ-ಬಜಾರ್ ಸಂಸ್ಥೆಯ ಎಂಡಿ ಯೋಗೇಂದ್ರ ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲರು ಪ್ರದಾನ ಮಾಡಿದರು.

> ಕಡಿಮೆ ಇಳುವರಿ ಹೊಂದಿದ್ದ ನಮ್ಮ ಕುಟುಂಬ ಅಡಕೆ ಬೆಳೆಯುತ್ತಿದೆ. ಸ್ವಯಂ ಪ್ರೇರಣೆಯಿಂದ ಕೃಷಿ ಪದವಿ ಪಡೆದುಕೊಂಡಿದ್ದು ತಂದೆ-ತಾಯಿ ಮತ್ತು ಪ್ರಾಧ್ಯಾಪಕರ ಸಹಕಾರದಿಂದ ಸಾಧನೆ ಮಾಡಿರುವೆ. ಮುಂದೆ ಕೃಷಿ ವಿಜ್ಞಾನಿ ಆಗಬೇಕೆಂಬ ಆಸೆ ಇದ್ದು, ಆ ನಿಟ್ಟಿನಲ್ಲಿ ಗಮನ ಹರಿಸಿದ್ದೇನೆ.
> | ಟಿ.ಎಲ್. ದೀಪ್ತಿ 13 ಚಿನ್ನದ ಪದಕ ಪಡೆದ ಸಾಧಕಿ

> ತಂದೆ-ತಾಯಿಗೆ ನಾನು ಕೃಷಿ ಕೋರ್ಸ್ ಸೇರಿ ದೊಡ್ಡ ಸಾಧನೆ ಮಾಡುವ ಆಸೆ ಇತ್ತು. ಅದೀಗ ಸಾಕಾರವಾಗಿದೆ. ಕೃಷಿ ಜಮೀನು ಇಲ್ಲದ ಕೊರಗು ನೀಗಿಸಿಕೊಳ್ಳಲು ರೈತರಿಗೆ ಉಪಯೋಗವಾಗುವ ಕೆಲಸ ಮಾಡುವಳಿದ್ದೇನೆ. ಪಿಎಚ್.ಡಿ ಮಾಡಿ ಕೃಷಿ ಕ್ಷೇತ್ರದಲ್ಲೇ ಮುಂದುವರಿಯುವೆ.
> | ಆರ್. ಸ್ಫೂರ್ತಿ 9 ಚಿನ್ನದ ಪದಕ ಪಡೆದ ಸಾಧಕಿ

> ನಮ್ಮ ಕುಟುಂಬ ಕೃಷಿ ಹಿನ್ನೆಲೆ ಹೊಂದಿದ್ದು, ಆದಾಯ ವ್ಯವಸಾಯದಿಂದಲೇ ಬರುತ್ತಿದೆ. ಈ ಕಾರಣದಿಂದ ಕೃಷಿ ಕೋರ್ಸ್ ಸೇರಿದ್ದು, ಸತತ ಪರಿಶ್ರಮದಿಂದ ಸಾಧನೆ ಮಾಡಲು ಸಾಧ್ಯವಾಗಿದೆ. ಮುಂದೆ ಉದ್ಯೋಗಕ್ಕೆ ಸೇರುವ ಬದಲು ಸ್ವಂತ ಉದ್ದಿಮೆ ಸ್ಥಾಪಿಸುವ ಹೆಬ್ಬಯಕೆ ಇದೆ. ಅದನ್ನು ನಮ್ಮ ಊರಿನಲ್ಲೇ ಮಾಡುವ ಗುರಿ ಕೂಡ ಹೊಂದಿರುವೆ.
> | ಐಶ್ವರ್ಯ ಗಣಪತಿ ಗೌಡ 7 ಚಿನ್ನದ ಪದಕ ಪಡೆದ ಸಾಧಕಿ

Vijayavani pg 05

ಸಾವಯವ ಕೃಷಿಗೆ ಆದ್ಯತೆ ನೀಡಿ: ರಾಜ್ಯಪಾಲ

ಬೆಂಗಳೂರು ಕೃಷಿ ವಿವಿ ಘಟಿಕೋತ್ಸವ | ಇಬ್ಬರಿಗೆ ಡಾಕ್ಟರೇಟ್, 63 ಮಂದಿಗೆ ಚಿನ್ನದ ಪದಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಸಾಯನಿಕ ಗೊಬ್ಬರ, ಕೀಟನಾಶಕ ಹೆಚ್ಚಿನ ಸಿಂಪಡಣೆಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುವುದರಿಂದ ರೈತರು ಸಾಂಪ್ರದಾಯಿಕ ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಆದ್ಯತೆ ನೀಡಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಸಲಹೆ ನೀಡಿದರು.

ಗುರುವಾರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ(ಜಿಕೆವಿಕೆ) ಆಯೋಜಿಸಿದ್ದ 59ನೇ ಘಟಿಕೋತ್ಸವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣ್ಯನ್, ಇಫ್ಕೊ ಮಾರ್ಕೆಟಿಂಗ್ ನಿರ್ದೇಶಕ ಯೋಗೇಂದ್ರ ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಮತ್ತು ಕೃಷಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆಸ್ಮಾರ್ಟ್‌ಕೃಷಿತಂತ್ರಜ್ಞಾನಅಳವಡಿಸಿಕೊಂಡು ಲಾಭದಾಯಕ ಕೃಷಿಗೆ ರೈತರು ಹೆಚ್ಚು ಆದ್ಯತೆ ನೀಡಬೇಕು. ಸಾಂಪ್ರದಾಯಿಕ ಕೃಷಿ ಪದ್ಧತಿಗಳು ತಲೆಮಾರುಗಳ ಬುದ್ಧಿವಂತಿಕೆ ಮತ್ತು ಪರಿಸರ ಸಮತೋಲನದ ಮೇಲೆ ನಿರ್ಮಿಸಲ್ಪಟ್ಟಿವೆ. ಆದರೂ ಅವುಗಳನ್ನು 21ನೇ ಶತಮಾನದ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ ಸಮನ್ವಯಗೊಳಿಸಬೇಕು. ನಿಖರ ಕೃಷಿಗಾಗಿ ಉಪಗ್ರಹ ಚಿತ್ರಣ ಮತ್ತು ಡ್ರೋನ್‌ಗಳನ್ನು ಬಳಕೆ, ನೀರಿನ ಸಂರಕ್ಷಣೆಗಾಗಿ ನಿಖರ ನೀರಾವರಿ ಪದ್ಧತಿ ಅಳವಡಿಕೆ, ನೈಜ ಸಮಯದ ಬೆಳೆ ನಿರ್ವಹಣೆಗಾಗಿ ಮೊಬೈಲ್ ಆಧಾರಿತ ಸಲಹಾ ಸೇವೆಗಳನ್ನು ನಿಯೋಜಿಸುವುದು ಕೃಷಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಎಐ ಮತ್ತು ಯಂತ್ರ ಕಲಿಕೆ ಈಗಾಗಲೇ ಬೆಳೆ ಮುನ್ಸೂಚನೆ, ಕೀಟ ಮತ್ತು ರೋಗ ಪತ್ತೆ, ಮಾರುಕಟ್ಟೆ ನಿಪುಣತೆ ಕ್ಷೇತ್ರಗಳಲ್ಲಿ ಕ್ರಾಂತಿಯನ್ನು ಉಂಟು ಮಾಡುತ್ತಿವೆ. ಈ ಶಕ್ತಿಶಾಲಿ ಸಾಧನಗಳನ್ನು ಬಳಸಿಕೊಳ್ಳಲು ಡಿಜಿಟಲ್ ಮೂಲಸೌಕರ್ಯದಲ್ಲಿ ಹೂಡಿಕೆ ಮಾಡಬೇಕೆಂದು ತಿಳಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಬೆಂಗಳೂರು ಕೃಷಿ ವಿವಿ ರಾಜ್ಯದ ಕೃಷಿ ಕ್ಷೇತ್ರದ ಬೆಳವಣಿಗೆಗೆ ಅನೇಕ ಕೊಡುಗೆ ನೀಡಿದೆ ಎಂದರು. ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್, ಕುಲಸಚಿವ ಡಾ.ಕೆ.ಸಿ.ನಾರಾಯಣಸ್ವಾಮಿ, ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಡಾ.ಯು.ಎಸ್.ಅವಸ್ಥಿ ಇದ್ದರು.



ಬೆಂಗಳೂರು ಕೃಷಿ ವಿವಿ 59ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು, ಬಿಎಸ್ಸಿ ಆನರ್ಸ್ ಕೃಷಿಯಲ್ಲಿ 13 ಚಿನ್ನದ ಪದಕ ಪಡೆದ ದೀಪ್ತಿ ಟಿ.ಎಲ್. ಅವರಿಗೆ ಚಿನ್ನದ ಪದಕ ಪ್ರದಾನ ಮಾಡಿದರು. ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಸೇರಿದಂತೆ ಮತ್ತಿತರರು ಇದ್ದರು.

1271 ಮಂದಿಗೆ ಪದವಿ ಪ್ರದಾನ

ಘಟಿಕೋತ್ಸವದಲ್ಲಿ ಒಟ್ಟು 1271 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 871 ವಿವಿಧ ಸ್ನಾತಕ ಪದವಿ, 311 ಸ್ನಾತಕೋತ್ತರ ಪದವಿ ಹಾಗೂ 89 ಡಾಕ್ಟೊರಲ್ ಪದವಿ ಮತ್ತು 63 ವಿದ್ಯಾರ್ಥಿಗಳಿಗೆ ಒಟ್ಟು 150 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ವಿ ರೈತ ಮಿತ್ರ



ಪ್ಯಾಷನ್ ಹಣ್ಣಿನ ಬಳ್ಳಿಯಲ್ಲಿ ಕಂದು ಮಚ್ಚೆಗಳು ಕಂಡುಬಂದಿದ್ದು, ಇದಕ್ಕೆ ಪರಿಹಾರ ತಿಳಿಸಿ.

| ಸೋನಾಲಿ ಶಿರಸಿ

ಪ್ಯಾಷನ್ ಹಣ್ಣು ಬಹುಬೇಗ ಹಬ್ಬುವ ತೆವಳು ಬಳ್ಳಿ. ಈ ಹಣ್ಣಿನಲ್ಲಿ ವಿವಿಧ ಜೀವಸತ್ವ ಮತ್ತು ಖನಿಜ ಪದಾರ್ಥಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಈ ಹಣ್ಣುಗಳನ್ನು ಸೇವಿಸುವುದರಿಂದ ಕಣ್ಣುಗಳ ದೃಷ್ಟಿ ಸುಧಾರಿಸುತ್ತದೆ ಹಾಗೂ ಹೃದಯ ರೋಗಗಳ ನಿವಾರಣೆಯಾಗುತ್ತದೆ. ಪ್ಯಾಷನ್ ಹಣ್ಣಿನ ಬಳ್ಳಿಯ ಎಲೆಗಳ ಮೇಲೆ ರೋಗ ಸೋಂಕು ಕಂಡು ಬಂದಾಗ ಕಂದು ಬಣ್ಣದ ದುಂಡಾಗಿರುವ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಹಾನಿ ತೀವ್ರವಿದ್ದಾಗ ಬಳ್ಳಿಗಳ ಬೆಳವಣಿಗೆ ನಶಿಸುತ್ತವೆ ಹಾಗೂ ರೋಗಕ್ಕೆ ತುತ್ತಾದ ಎಲೆಗಳು ಪೂರ್ಣ ಬಲಿಯುವುದಕ್ಕೆ ಮುಂಚೆಯೇ ಕಳಚಿ ಬೀಳುತ್ತವೆ.

ನಿರ್ವಹಣೆ: ಹಾನಿಗೊಳಗಾದ ಹಂಬುಗಳನ್ನು ಸವರಿ ತೆಗೆದು ಸುಡಬೇಕು. ನಂತರ ಪ್ರತಿ ಲೀಟರ್ ನೀರಿಗೆ ಜೈನೆಬ್ 75 ಡಬ್ಲ್ಯು.ಪಿ 2.0 ಗ್ರಾಂ ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆಪ್ ಮಾಡಿ

Vijayavani pg 08

Kannadaprabha pg 04

ಕೃಷಿ ವಿಶ್ವವಿದ್ಯಾನಿಲಯ 59ನೇ ಘಟಿಕೋತ್ಸವ | ಇಫ್ಕೊ ಸಂಸ್ಥೆ ನಿರ್ದೇಶಕ ಡಾ.ಯು.ಎಸ್.ಅವಸ್ಥಿ ಸಲಹೆ

ಆಧುನಿಕ ಬೇಸಾಯ ಸುರಕ್ಷತೆ ಹೊಣೆ

•ಬೆಂಗಳೂರು: ಆಧುನಿಕ ಬೇಸಾಯ ಪದ್ಧತಿ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಯುವ ವಿಜ್ಞಾನಿಗಳ ಮೇಲಿದೆ ಎಂದು ಇಫ್ಕೊ ಸಂಸ್ಥೆಯ ನಿರ್ದೇಶಕ ಡಾ.ಯು.ಎಸ್. ಅವಸ್ಥಿ ಹೇಳಿದರು.

ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರಾಷ್ಟ್ರೀಯ ಸಭಾಂಗಣದಲ್ಲಿ ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ 59ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಮಿತಿಮೀರಿದ ರಾಸಾಯನಿಕ ಬಳಕೆಯಿಂದ ಆಹಾರ ವಿಷವಾಗುತ್ತಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಹಾಗೂ ಸ್ಥಳೀಯರ ಸುರಕ್ಷತೆಗೆ ಹೆಚ್ಚಿನಆದ್ಯತೆನೀಡಬೇಕು.ಕೃಷಿತಂತ್ರಜ್ಞಾನದುಬಾರಿಯಾಗಿದ್ದು, ಈ ಸವಾಲನ್ನು ಮೆಟ್ಟಿ ನಿಂತು ಕೈಗೆಟಕುವ ದರದಲ್ಲಿ ವ್ಯವಸಾಯ ಮಾಡುವ ಹಾಗೂ ಉತ್ಪಾದನಾ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೃಷಿ ವಿಜ್ಞಾನಿಗಳು ಸಂಶೋಧನೆಯನ್ನು ನಡೆಸಬೇಕು ಎಂದು ಕರೆ ನೀಡಿದರು.

ಕೃಷಿ ಸಚಿವ ಚೆಲುವರಾಯಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ಕೃಷಿ ಕ್ಷೇತ್ರವು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದು, ಅವುಗಳಲ್ಲಿ ಹವಾಮಾನ ವೈಪರೀತ್ಯದಿಂದ ಮಳೆಯ ಹೆಚ್ಚಿಕೆಯಲ್ಲಿ ಬದಲಾವಣೆ, ತಾಪಮಾನದ ಏರಿಕೆ, ಮಣ್ಣಿನ ಆರೋಗ್ಯದಲ್ಲಿನ ವ್ಯತ್ಯಯ, ಬೆಳೆಗಳಲ್ಲಿ ಹೆಚ್ಚುತ್ತಿರುವ ರೋಗ ಕೂಲಿಕಾರ್ಮಿಕರ ಸಮಸ್ಯೆ, ಮಾರುಕಟ್ಟೆಸಂಬಂಧಿತಸಮಸ್ಯೆಗಳು ಕೃಷಿಕರನ್ನು ಸಂಕಷ್ಟಕ್ಕೆ ದೂಡಿವೆ. ಅಲ್ಲದೇ ರೈತರಲ್ಲಿನೀರಿನ ಬಳಕೆ ಸಾಮರ್ಥ್ಯ, ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳೆಡೆಗೆ ಆಸಕ್ತಿ ತೋರುತ್ತಿದ್ದು, ಸಾಂಪ್ರದಾಯಿಕ ಆಹಾರ ಬೆಳೆಗಳ ವಿಸ್ತೀರ್ಣ ಕಡಿಮೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಇಬ್ಬರಿಗೆ ಗೌರವ ಡಾಕ್ಟರೇಟ್

ಸುಸ್ಥಿರ ಅಭಿವೃದ್ಧಿ ಮತ್ತು ಗ್ರಾಮೀಣ ಜೀವನೋಪಾಯಕ್ಕೆ ನೀಡಿದ ಕೊಡುಗೆಗಾಗಿ ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಮತ್ತು ನ್ಯಾನೊ-ರಸಗೊಬ್ಬರಗಳಲ್ಲಿನ ನಾವೀನ್ಯತೆ ಮತ್ತು ಕೃಷಿ ಸಮುದಾಯಕ್ಕೆ ಸಮರ್ಪಕ ಸೇವೆಯನ್ನು ಗುರುತಿಸಿ ಇಫ್ಕೋ ಮಾರ್ಕೆಟಿಂಗ್ ನಿರ್ದೇಶಕ ಯೋಗೇಂದ್ರ ಕುಮಾರ್ ರವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

Hosadiganta pg 10

150 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

2023-24ನೇ ಸಾಲಿನಲ್ಲಿ ಒಟ್ಟು 1271 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು. 871 ವಿದ್ಯಾರ್ಥಿಗಳು ಸ್ನಾತಕ, 311 ಸ್ನಾತಕೋತ್ತರ, 89 ವಿದ್ಯಾರ್ಥಿಗಳಿಗೆ ಡಾಕ್ಟರೋಲ್ ಪದವಿಯನ್ನು ವಿವಿಧ ವಿಷಯಗಳಲ್ಲಿ ನೀಡಲಾಯಿತು. ಸ್ನಾತಕೋತ್ತರದಲ್ಲಿ 62, ಸ್ನಾತಕದಲ್ಲಿ 58 ಮಂದಿಗೆ ಸೇರಿದಂತೆ ಒಟ್ಟು 150 ಚಿನ್ನದ ಪದಕ ವಿತರಣೆ ಮಾಡಲಾಯಿತು.



ಮೆಕ್ಯಾನಿಕ್ ಮಗಳಿಗೆ 9 ಚಿನ್ನದ ಪದಕ

ಸೊರಬದ ತಲಕಾಲಕೊಪ್ಪದ ಶಿಕ್ಷಕನ ಮಗಳಾದ ದೀಪ್ತಿ ಟಿ.ಎಲ್ ಬಿ.ಎಸ್ಸಿ, ಕೃಷಿಯಲ್ಲಿ ಒಟ್ಟು 13 ಚಿನ್ನದ ಪದಕ ಗಳಿಸಿ ವಿವಿಗೆ ಮೊದಲಸ್ಥಾನ ಪಡೆದಿದ್ದಾಳೆ. ಮೈಸೂರಿನ ದ್ವಿ-ಚಕ್ರ ವಾಹನ ಮೆಕ್ಯಾನಿಕ್ ಮಗಳಾದ ಸ್ಫೂರ್ತಿ ಆರ್ ಒಟ್ಟು 9 ಚಿನ್ನಪದಕ ಗಳಿಸಿ ಎರಡನೇ ಸ್ಥಾನ ಪಡೆದರೆ, ಶಿರಸಿಯ ಕೃಷಿಕನ ಮಗಳಾದ ಐಶ್ವರ್ಯ ಗಣಪತಿ ಗೌಡ ಒಟ್ಟು 7 ಚಿನ್ನದ ಪದಕಗಳಿಸಿ ಮೂರನೇ ಸ್ಥಾನ ಪಡೆದಿದ್ದಾಳೆ.

ಅನಿಶ್ಚಿತ ಹವಾಮಾನ ಕೃಷಿಗೆ ಸವಾಲು

ಕೃಷಿ ವಿವಿಯ 59ನೇ ಘಟಿಕೋತ್ಸವದಲ್ಲಿ ಯು.ಎಸ್.ಅವಸ್ಥಿ ಹೇಳಿಕೆ

ಸಂ.ಕ.ಸಮಾಚಾರ, ಬೆಂಗಳೂರು

ಏರುತ್ತಿರುವ ಉತ್ಪಾದನಾ ವೆಚ್ಚ ಕ್ಷೀಣಿಸುತ್ತಿರುವ ನೈಸರ್ಗಿಕ ಸಂಪತ್ತು ಅನಿಶ್ಚಿತ ಹವಾಮಾನವು ಕೃಷಿಗೆ ದೊಡ್ಡ ಸವಾಲುಗಳು ಎಂದು ನವದೆಹಲಿಯ ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಯು.ಎಸ್.ಅವಸ್ಥಿ ಹೇಳಿದರು.ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ 59ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಕೃಷಿ ಅಂದರೆ ಆಹಾರ ಉತ್ಪಾದನೆಯಷ್ಟೇ ಅಲ್ಲ, ನಮ್ಮ ಅರ್ಥಿಕತೆಯ ಬೆನ್ನೆಲುಬು, ಗ್ರಾಮೀಣ ಸಮುದಾಯಗಳ ಹೃದಯದ ಬಡಿತ, ಪರಿಸರ ಸಮತೋಲನದ ಮೂಲಾಧಾರ, ಆಗಾಗ ಉಂಟಾಗುವ ಬರಗಾಲ, ಪ್ರವಾಹ, ತೀವ್ರ ತಾಪಮಾನಗಳು ಕೃಷಿಕರಿಗೆ ಸಂಕಷ್ಟಗಳನ್ನು ತಂದೊಡ್ಡುತ್ತವೆ ಎಂದರು.



ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ 59ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಿದರು. ಸಚಿವ ಎನ್.ಚಲುವರಾಯಸ್ವಾಮಿ ಮತ್ತಿತರರಿದ್ದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿ, ದೇಶದ ಕೃಷಿ ಕ್ಷೇತ್ರದ ವಿಸ್ತೀರ್ಣ ಹೆಚ್ಚಿಸುವಲ್ಲಿ ಮತ್ತು ಸುಸ್ಥಿರ ಕೃಷಿಯನ್ನು ಕಾಯ್ದುಕೊಳ್ಳುವಲ್ಲಿ ಸ್ಥಳೀಯ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದ ಅವರು, ಉಪಗ್ರಹ ಆಧಾರಿತವಾಗಿಯೂ ಕೂಡ ಕೃಷಿಗೆ ಹಲವು ರೀತಿಯಲ್ಲಿ ಉಪಯೋಗ ಪಡೆದುಕೊಳ್ಳಬಹುದಾಗಿದೆ. ರೈತರು ಮಣ್ಣಿನ ಆರೋಗ್ಯವನ್ನು ಮೇಲ್ವಿಚಾರಣೆ ಮಾಡಲು, ನೀರಿನ ಬಳಕೆಯನ್ನು ಅತ್ಯುತ್ತಮವಾಗಿಸಲು ಮತ್ತು ಬೆಳೆ ನಿರ್ವಹಣಾ ಪದ್ಧತಿಗಳನ್ನು ಸಮರ್ಥವಾಗಿ ಅಳವಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೃತಕ ಬುದ್ಧಿಮತ್ತೆಯೊಂದಿಗೆ ಡಿಜಿಟಲ್ ಕೃಷಿ ತಾಂತ್ರಿಕತೆಗಳಿಗೆ ರಾಜ್ಯ ಸರ್ಕಾರ ಹೆಚ್ಚು ಒತ್ತುನೀಡುತ್ತದೆ. ಎಲ್ಲಾ ಜಿಲ್ಲೆಗಳಲ್ಲಿ ಕೃಷಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ನೀರಿನ ಸದ್ಬಳಕೆಗೆ ಶೇ.90ರ ಸಬ್ಸಿಡಿಯಲ್ಲಿ ಹನಿ ನೀರಾವರಿ, ಮಣ್ಣಿನ ಆರೋಗ್ಯಕ್ಕೆ ಕೃಷಿ ತ್ಯಾಜ್ಯಗಳ ಬಳಕೆ, ಕೃಷಿಯಲ್ಲಿ ಉಪಗ್ರಹ ಆಧಾರಿತ ತಾಂತ್ರಿಕತೆಗಳ ಬಳಕೆಗೆ ಸರ್ಕಾರ ಒತ್ತು ನೀಡಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಹ್ಮಣ್ಯನ್, ಇಫ್ಕೊ ಮಾರ್ಕೆಟಿಂಗ್ ನಿರ್ದೇಶಕ ಯೋಗೇಂದ್ರ ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಹಾಗೂ ಕೃಷಿ ಪದವಿ ಅಭ್ಯರ್ಥಿಗಳಿಗೆ ಪ್ರದಾನ ಮಾಡಲಾಯಿತು. ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಕುಲಸಚಿವ ಡಾ.ಕೆ.ಸಿ.ನಾರಾಯಣಸ್ವಾಮಿ ಇತರರಿದ್ದರು.

1,271 ಮಂದಿಗೆ ಪದವಿ ಪ್ರದಾನ

ಕೃಷಿ ವಿಶ್ವವಿದ್ಯಾಲಯ 2023-24ನೇ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆಯಾದ 1,271 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದರಲ್ಲಿ 871 ವಿದ್ಯಾರ್ಥಿಗಳು ವಿವಿಧ ಸ್ನಾತಕ ಪದವಿಗಳನ್ನು, 311 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಹಾಗೂ 89 ವಿದ್ಯಾರ್ಥಿಗಳಿಗೆ ಡಾಕ್ಟೊರಲ್ ಹಾಗೂ ಎಲ್ಲಾ ವಿಭಾಗದಿಂದ 63 ವಿದ್ಯಾರ್ಥಿಗಳಿಗೆ ಒಟ್ಟು 150 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಚಿನ್ನದ ಪದಕಗಳು: ಸ್ನಾತಕ ಪದವಿ(ಬಿ.ಎಸ್ಸಿ) ವಿಭಾಗದಲ್ಲಿ ಟಿ.ಎಲ್.ದೀಪ್ತಿ 13 ಚಿನ್ನದ ಪದಕ, ಆರ್.ಸ್ಫೂರ್ತಿ 9 ಚಿನ್ನದ ಪದಕ, ಡಿ.ಎಸ್.ಯಕ್ಷಿತ್ 03 ಚಿನ್ನದ ಪದಕ, ಐಶ್ವರ್ಯ ಗಣಪತಿಗೌಡ 7 ಚಿನ್ನದ ಪದಕ, ಸಾಯಿಂತನ್ ಮೈತ್ರಿ (ಬಿ.ಟೆಕ್) 3 ಚಿನ್ನದ ಪದಕ, ಸ್ನಾತಕೋತ್ತರ ಪದವಿ ವಿಭಾಗದ ಆರ್.ಆರ್ತಿ 5 ಚಿನ್ನದ ಪದಕ ಹಾಗೂ ಪಿಎಚ್.ಡಿ ಪದವಿಯಲ್ಲಿ ಕೆ.ಎಂ.ಪ್ರವಳಿಕಾಗೆ 4 ಚಿನ್ನದ ಪದಕ ಸಿಕ್ಕಿದೆ.



ಕೃಷಿ ವಿಜ್ಞಾನಿ ಆಗುವೆ

ಅಪ್ಪ ಅಮ್ಮನ ನಿರಂತರ ಪ್ರೋತ್ಸಾಹ ಅಧ್ಯಾಪಕ ಮಾರ್ಗದರ್ಶನದಿಂದ 13 ಚಿನ್ನದ ಪದಕಗಳನ್ನು ಪಡೆಯಲು ಸಾಧ್ಯವಾಯಿತು. ಜೊತೆಗೆ ನಮ್ಮದು ಮೂಲತಃ ಕೃಷಿ ಕುಟುಂಬ. ನಾನು ಕೃಷಿ ವಿಜ್ಞಾನಿ ಆಗುವೆ.

▪ಟಿ.ಎಲ್.ದೀಪ್ತಿ | 13 ಚಿನ್ನದ ಪದಕ ವಿಜೇತೆ

S-karnataka pg 04

On its diamond jubilee, UAS awards 126 golds, 1,271 degrees at convocation

EXPRESS NEWS SERVICE
@ Bengaluru

THE University of Agricultural Sciences (UAS), Bengaluru, marked its 60th year of establishment by hosting its 59th convocation ceremony at the Dr Babu Rajendra Prasad International Convention Centre, GKVK campus, on Thursday.

A total of 1,271 degrees were awarded, including 871 Bachelor's, 311 Master's and 89 Doctoral degrees. In all, 126 gold medals and 24 donors' gold medal certificates were distributed to 63 students, stated Vice-Chancellor SV Suresha. Also, retired IAS officer V Balasubramanian and marketing director of IFFCO Yogendra Kumar were conferred honorary doctorates.

Agriculture Minister and Pro-Chancellor N Cheluvaraswamy highlighted UAS Bengaluru's academic and research achievements. He noted that the university has consistently ranked among the top State Agricultural Universities (SAUs) in India and produced a significant number of agricultural research scientists. "The university has played a vital role in the success of the Green Revolution in Karnataka and continues to lead in agricultural education, research, and extension," he added.

Delivering the keynote address, IFFCO Managing Director US Awasthi said, "Agriculture is more than just food production; it is the backbone of our economy, the heartbeat of rural communities, and essential to our ecological balance."

Governor Thaawarchand Gehlot said, "The university has played a crucial role in transforming agriculture through integrated farming systems, sustainable practices, mechanisation and land reforms."



> The university has played a crucial role in transforming agriculture through integrated farming, sustainable practices, mechanisation and land reforms
>
> Thaawarchand Gehlot, Karnataka governor

Governor Thaawarchand Ghelot and Agriculture Minister N Cheluvarayaswamy arrive for the 59th convocation ceremony of UAS at GKVK on Thursday | NAGARAJA GADEKAL

Ind Exp Pg 04

S-karnataka pg 07

ಜನರ ಆರೋಗ್ಯದೊಂದಿಗೆ ಚೆಲ್ಲಾಟ | ಪ್ರಾಕೃತಿಕವಾಗಿ ಮಾಗಿದ ಹಣ್ಣುಗಳಿಗೆ ಆದ್ಯತೆ ನೀಡಲು ಸಲಹೆ

ಕೆಮಿಕಲ್ ಬಳಸಿ ಮಾಗಿಸಿದ ಮಾವು ಅಪಾಯಕಾರಿ

▪ ಪಿ. ವೈ ರವಿಂದ್ರ ಹೇರ್ಳೆ

ಸಂ.ಕ. ಸಮಾಚಾರ, ರಾಮನಗರ

ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾಗಿಸಿದ ಮಾವು ಸೇವನೆ ಮಾಡುತ್ತಿದ್ದೀರಾ? ಹಾಗಾದರೆ ಇಂದೇ ಬಿಟ್ಟು ಬಿಡಿ. ಇಲ್ಲವಾದರೆ ಮಾರಣಾಂತಿಕ ಕಾಯಿಲೆಗೆ ನೀವು ತುತ್ತಾಗಲಿದ್ದೀರಾ. ಆಶ್ಚರ್ಯವಾದರೂ ಇದು ಸತ್ಯ ಕಳೆದ ಹಲವು ವರ್ಷಗಳಿಂದಲು ಈ ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾಗಿಸಿದ ಮಾವಿನ ಹಣ್ಣು ಸಾರ್ವಜನಿಕರಿಗೆ ಸುಲಭವಾಗಿ ಹಾಗೂ ಕಡಿಮೆ ಬೆಲೆಯಲ್ಲಿ ಲಭ್ಯವಾಗುತ್ತಿತ್ತು. ಹಾಗಾಗಿ ಜನತೆ ಆರೋಗ್ಯದ ಮೇಲೆ ಗಮನ ಹರಿಸದೆ ಮಾವು ಸೇವನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇತ್ತೀಚಿನ ಅಧ್ಯಯನ ಪ್ರಕಾರ ಈ ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾಗಿಸಿದ ಹಣ್ಣು ಸೇವನೆಯಿಂದಾಗಿ ಜನತೆಯಲ್ಲಿ ಸಕ್ಕರೆ ಹಾಗೂ ಕ್ಯಾನ್ಸರ್ ಗೆ ತುತ್ತಾಗಲಿದ್ದಾರೆ ಎಂಬುದನ್ನು ದೃಢಪಡಿಸಿದೆ.

ಇತ್ತೀಚಿನ ದಿನದಲ್ಲಿ ಕ್ಯಾಲ್ಸಿಯಂ ಕಾರ್ಬೈಡ್(ಔಷಧಿ) ಬಳಸಿ ಮಾಗಿಸಿದ ಹಣ್ಣು ಎಲ್ಲೆಡೆ ಕಾಣಸಿಗುತ್ತಿದೆ. ಪ್ರಾಕೃತಿಕವಾಗಿ ಮಾಗಿಸಿದ ಹಣ್ಣು ಕಡಿಮೆಯಾಗಿದೆ. ಈ ರೀತಿ ವಾಮ ಮಾರ್ಗದಲ್ಲಿ ಮಾವು ಮಾಗಿಸಿದ್ದನ್ನು ಸೇವಿಸಿದರೆ ಜನತೆ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತದೆ. ಹಾಗಾಗಿ ಈ ಬಗ್ಗೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಜಾಗೃತರಾಗಿರಬೇಕೆಂದು ತಿಳಿಸಿದ್ದಾರೆ.

ವ್ಯತ್ಯಾಸಗಳು: ಸಾಮಾನ್ಯವಾಗಿ ನೈಸರ್ಗಿಕವಾಗಿ ಹಾಗೂ ಔಷಧಿ ಬಳಸಿ ಮಾಗಿಸಿದ ಮಾವಿನ ಹಣ್ಣನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಕಾರ್ಬೈಡ್ ಮಾಗಿದ ಮಾವಿನ ಹಣ್ಣುಗಳಲ್ಲಿ ಒಂದೇ ರೀತಿ ಹಾಗೂ ಒಂದೇ ಬಣ್ಣದಲ್ಲಿ ಇರುತ್ತದೆ. ಅಲ್ಲಲ್ಲಿ ಹಸಿರು ಹಾಗೂ ಕಪ್ಪು ಚುಕ್ಕಿಗಳಿರುತ್ತದೆ. ನೈಸರ್ಗಿಕವಾಗಿ ಮಾಗಿದ ಮಾವು ಸ್ವಲ್ಪ ಕೆಂಪು ಹಾಗೂ ಹಳದಿ ಮಿಶ್ರಿತ ಬಣ್ಣದಲ್ಲಿರುತ್ತದೆ. ನೈಸರ್ಗಿಕವಾಗಿ ಮಾಗಿದ ಹಣ್ಣಿನ ಸ್ಪರ್ಶ ತುಂಬಾ ಮೃದುವಾಗಿರುತ್ತದೆ. ಜತೆಗೆ ಸಿಹಿಯಾಗಿ ಮಾಗಿದ ಪರಿಮಳ ಇರುತ್ತದೆ. ಆದರೆ, ಅದೇ ಔಷಧಿ ಬಳಸಿ ಮಾಗಿಸಿದ ಹಣ್ಣು ಮೃದುತ್ವ ಕಳೆದುಕೊಂಡಿರುತ್ತೆ. ವಾಸನೆಯು ಇರುವುದಿಲ್ಲ.



ನೀವೇ ಕಂಡು ಹಿಡಿಯಿರಿ:

ಔಷಧಿ ಬಳಸಿ ಮಾಗಿಸಿದ ಮಾವು ನೀರಿನಲ್ಲಿ ತೇಲುತ್ತವೆ. ನೈಸರ್ಗಿಕವಾಗಿ ಮಾಗಿದ ಹಣ್ಣು ನೀರಿನಲ್ಲಿ ಮುಳುಗುತ್ತವೆ. ಪೂರ್ಣ ಹಣ್ಣಾಗುವುದಿಲ್ಲ. ಒಳಗೆ ಬಿಳಿಯಾಗಿರುತ್ತದೆ. ಹಾಗೂ ಹುಳಿ ರುಚಿ ಇರುತ್ತದೆ. ಆದರೆ, ನೈಸರ್ಗಿಕವಾಗಿ ಮಾಗಿದಹಣ್ಣು ರುಚಿಯಾಗಿದ್ದು, ಹೆಚ್ಚು ರಸ ಹೊಂದಿರುತ್ತದೆ.

ಕ್ಯಾನ್ಸರ್‌ಕಾರಕ ಪದಾರ್ಥಗಳ ಬಳಕೆ

ಕ್ಯಾಲ್ಸಿಯಂ ಕಾರ್ಬೈಡ್ ಬಳಸಿ ಮಾಗಿಸಿದ ಮಾವು ಹಣ್ಣು ಸೇವನೆ ಆರೋಗ್ಯಕ್ಕೆ ಹಾನಿಕಾರ. ಸಕ್ಕರೆ ಕಾಯಿಲೆ ಹಾಗೂ ಕ್ಯಾನ್ಸರ್ ಕಾಯಿಲೆಗೆ ಗುರಿಯಾಗಬಹುದು.

▪ರಾಜು, ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ರಾಮನಗರ

ಆರೋಗ್ಯಕ್ಕೆ ಹಾನಿ..

ಇನ್ನು ಔಷಧಿ ಬಳಸಿ ಮಾಗಿಸಿದ ಮಾವಿನ ಹಣ್ಣು ಆರೋಗ್ಯಕ್ಕೆ ಹಾನಿಕಾರಕವಾಗಿರಲಿದೆ. ಜೊತೆಗೆ ಕ್ಯಾನ್ಸರ್ ಕಾರಕವಾಗಲಿದೆ. ಜತೆಗೆ, ಆರೋಗ್ಯ ಹಾನಿಯಾಗಲಿದೆ ಎಂಬುದನ್ನುತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೃಷಿ ಪ್ರಗತಿಗೆ ಯುವಜನತೆ ಪಾಲುದಾರರಾಗಿ: ಗೌರ್ನರ್

ಸ್ಟಾರ್ಟ್‌ಅಪ್, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಯೋಜನೆ ಬಳಸಿಕೊಳ್ಳಿ | ಕೃಷಿ ವಿವಿ 59ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರ ಸಲಹೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಯುವಜನತೆ ಸ್ಟಾರ್ಟ್‌ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತದಂತಹ ಯೋಜನೆಗಳ ಸಮರ್ಪಕ ಸದುಪಯೋಗ ಪಡೆಸಿಕೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು. ಕೃಷಿ ಆಧಾರಿತ ಸ್ಟಾರ್ಟ್ ಅಪ್‌ಗಳು ದೇಶದ ಆರ್ಥಿಕತೆಯನ್ನು ಕ್ರಾಂತಿಗೊಳಿಸಬಲ್ಲವು ಎಂದು ಕೃಷಿ ವಿಶ್ವವಿದ್ಯಾಲಯ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಗುರುವಾರ ಏರ್ಪಡಿಸಿದ್ದ 59ನೇ ಘಟಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೃಷಿ ಕ್ಷೇತ್ರದಲ್ಲಿ ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವಲ್ಲಿ ಭಾರತ ಮುಂಚೂಣಿಯಲ್ಲಿದೆ. ಪ್ರಸ್ತುತ ಕೃಷಿ ಉತ್ಪಾದನೆ ಬೇಡಿಕೆ ಪೂರೈಸಲು ಹೊಸ ಆಯ್ಕೆಗಳನ್ನು ಉತ್ತೇಜಿಸುವುದರ ಜೊತೆಗೆ ಕಡಿಮೆ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡುವ ಕೃಷಿ ತಂತ್ರಜ್ಞಾನ ಅಳವಡಿಸಿಕೊಳ್ಳುವ ಅಗತ್ಯವಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸಿದ ಸುಧಾರಿತ ಬೀಜಗಳು ಮತ್ತು ಸುಧಾರಿತ ತಳಿಗಳು ರೈತರ ಆದಾಯ ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಕೃಷಿ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ಡ್ರೋನ್ ತಂತ್ರಜ್ಞಾನ, ಉಪಗ್ರಹ ಚಿತ್ರಣ ಮತ್ತು ಸ್ಮಾರ್ಟ್ ನೀರಾವರಿ ವ್ಯವಸ್ಥೆಗಳ ಬಳಕೆಯು ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ನೀರಿನ ಬಳಕೆಯನ್ನು ಕಡಿಮೆ ಮಾಡಲು ಸಹಾಯವಾಗಲಿದೆ ಎಂದರು.

ಮಣ್ಣಿನಲ್ಲಿ ಸತು, ಕಬ್ಬಿಣಾಂಶದ ಕೊರತೆ : ಇಫ್ಕೋ ವ್ಯವಸ್ಥಾಪಕ ನಿರ್ದೇಶಕ ಡಾ.ಯು.ಎಸ್. ಅವಸ್ಥಿ ಮಾತನಾಡಿ, ಕೃಷಿ ಎಂಬುದು ಕೇವಲ ಆಹಾರ ಉತ್ಪಾದನೆ ಮಾತ್ರವಲ್ಲ ದೇಶದ ಆರ್ಥಿಕತೆಯ ಬೆನ್ನೆಲುಬು. ಗ್ರಾಮೀಣ ಸಮುದಾಯದ ಪ್ರದಯ ಬಡಿತ ಮತ್ತು ಪರಿಸರ ಸಮತೋಲನದ ಮೂಲಾಧಾರವಾಗಿದೆ. ಸದ್ಯ ಕೃಷಿ ನಿರ್ಣಾಯಕ ಹಂತದಲ್ಲಿದ್ದು 2050 ರ ವೇಳೆಗೆ 10 ಶತಕೋಟಿ ಜಾಗತಿಕ ಜನಸಂಖ್ಯೆಗೆ ಆಹಾರ ನೀಡಬೇಕು. ಹವಾಮಾನ ಬದಲಾವಣೆ ಅತ್ಯಂತ ಭೀಕರ ಸವಾಲಾಗಿದೆ.. ಹಾಗಾಗಿ ಜ್ಞಾನ, ಕೌಶಲ್ಯ ಮನೋಭಾವದಿಂದ ಜಗತ್ತಿಗೆ ಕಾಲಿಡುತ್ತಿರುವ ಯುವ ಪದವೀಧರರು ಕೃಷಿಯ ಭವಿಷ್ಯವನ್ನು ನಾವೀನ್ಯತೆಯಲ್ಲಿ ಕೊಂಡೊಯ್ಯಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವ್ಯವಸ್ಥಾಪನ ಮಂಡಳಿ ಹಾಗೂ ಶೈಕ್ಷಣಿಕ ಪರಿಷತ್ತಿನ ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಬಾಲಸುಬ್ರಹ್ಮಣಿಯನ್, ಯೋಗೇಂದ್ರಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ವಿ.ಬಾಲಸುಬ್ರಹ್ಮಣಿಯನ್, ಯೋಗೇಂದ್ರಗೆ ಗೌರವ ಡಾಕ್ಟರೇಟ್

59ನೇ ಘಟಿಕೋತ್ಸವದಲ್ಲಿ ವಿ.ಬಾಲಸುಬ್ರಹ್ಮಣಿಯನ್ ಹಾಗೂ ಯೋಗೇಂದ್ರ ಕುಮಾರ್ ಅವರಿಗೆ ರಾಜ್ಯಪಾಲರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ವಿ.ಬಾಲಸುಬ್ರಹ್ಮಣಿಯನ್ ಐಎಎಸ್ ಅಧಿಕಾರಿಯಾಗಿ ರಾಜ್ಯದ ರೇಷ್ಮೆ ಕೃಷಿ ವಲಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕೇಂದ್ರ ರೇಷ್ಮೆ ಮಂಡಳಿ ಸದಸ್ಯ ಕಾರ್ಯದರ್ಶಿಯಾಗಿ ಬಡ್ತಿ ಪಡೆದ ವೇಳೆ ರಾಷ್ಟ್ರೀಯ ರೇಷ್ಮೆ ಕೃಷಿ ಯೋಜನೆ ಪ್ರಾರಂಭಿಸಿದರು. 9 ರಾಜ್ಯಗಳಿಗೆ ವಿಸ್ತರಿಸುವಲ್ಲಿ ಹಾಗೂ ರಾಷ್ಟ್ರೀಯ ಮಟ್ಟದ ಸಂಶೋಧನೆ ಮತ್ತು ಅಭಿವೃದ್ಧಿ ಆಧುನಿಕರೀಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಯೋಗೇಶ್ ಕುಮಾರ್ ಇಫ್ಕೋ, ಈ-ಬಜಾರ್ ಮೊದಲಾದ ಅಂಗ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದು ನ್ಯಾನೋ ಪರಿಸರಸ್ನೇಹಿ,ಪರಿಸರಸ್ನೇಹಿಜೈವಿಕಕೀಟನಾಶಕಗಳ ಪರಿಣತಿ ಹೊಂದಿದ್ದಾರೆ. ಕಾಫಿ ಮಂಡಳಿ, ಮಸಾಲೆ ಮಂಡಳಿ ಹಾಗೂ ತಂಬಾಕು ಮಂಡಳಿಯೊಂದಿಗೆ ನ್ಯಾನೋ ಸಂಶೋಧನಾ ಸಹಯೋಗ ಪ್ರಾರಂಭಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ಕೃಷಿಯಲ್ಲಿ ಡ್ರೋನ್ ಆಧಾರಿತ ತಾಂತ್ರಿಕತೆ ಬಳಕೆಗೆ ಒತ್ತು: ಸಚಿವ

ಸಮಗ್ರ ಕೃಷಿ ಆಹಾರ ಪಾರ್ಕ್‌ಗಳ ಸ್ಥಾಪನೆ, ಕೃತಕ ಬುದ್ಧಿಮತ್ತೆಯೊಂದಿಗೆ ಡಿಜಿಟಲ್ ಕೃಷಿ ತಾಂತ್ರಿಕತೆ ಒತ್ತು. ಕೃಷಿ ಹವಾಮಾನ ವಲಯಗಳ ಮರುವಿಂಗಡಣೆಗೆ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೈತರಿಗೆ ಸಮಯಾಧಾರಿತ ಕೃಷಿ ಸಲಹೆಗಾಗಿ ಕರೆ ಕೇಂದ್ರದ ಉನ್ನತೀಕರಣ, ಇ-ಸ್ಯಾಪ್ ಮೂಲಕ ರೋಗ ಹಾಗೂ ಕೀಟಗಳ ಹತೋಟಿ ಸಲಹೆಗೆ ಜಿಲ್ಲಾಕೃಷಿ ತರಬೇತಿ ಕೇಂದ್ರಗಳ ಆನುಷ್ಠಾನ ಹಾಗೂ ಮಣ್ಣಿನ ಆರೋಗ್ಯಕ್ಕೆ ಕೃಷಿ ತ್ಯಾಜ್ಯಗಳ ಬಳಕೆ, ಕೃಷಿಯಲ್ಲಿ ಡ್ರೋನ್ ಆಧಾರಿತ ತಾಂತ್ರಿಕತೆ ಬಳಕೆಗೆ ಒತ್ತು ನೀಡಲಾಗಿದೆ. ರಾಜ್ಯದಲ್ಲಿ ಕೃಷಿ ಕ್ಷೇತ್ರವು ಅನೇಕ ಸವಾಲು ಎದುರಿಸುತ್ತಿದೆ. ರಾಜ್ಯದಲ್ಲಿ ಸಿರಿಧಾನ್ಯ, ದ್ವಿದಳ ಹಾಗೂ ಎಣ್ಣೆಕಾಳು ಬೆಳೆಗಳ ಉತ್ಪಾದನೆ ಹೆಚ್ಚಿಸಲು ಪೂರಕ ಕ್ರಮಗಳಿಗೆ ಉತ್ತೇಜನ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದರು.

1271 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಕೃಷಿ ವಿಶ್ವವಿದ್ಯಾಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆ ಹೊಂದಿದ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗ, ಪಿಎಚ್‌ಡಿ ಸೇರಿದಂತೆ ಒಟ್ಟು 1,271 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ನಡೆಯಿತು.

ಈ ಪೈಕಿ 871 ವಿದ್ಯಾರ್ಥಿಗಳು ವಿವಿಧ ಸ್ನಾತಕ ಪದವಿ, 311 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಹಾಗೂ 89 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ನೀಡಿ ಗೌರವಿಸಿದರು. ಪಿಎಚ್‌ಡಿ ವಿಭಾಗದಲ್ಲಿ 13 ವಿದ್ಯಾರ್ಥಿನಿಯರು, 3 ವಿದ್ಯಾರ್ಥಿಗಳು ಸೇರಿ 16 ಮಂದಿ ಕೃಷಿ ವಿಶ್ವವಿದ್ಯಾಲಯ ಹಾಗೂ ದಾನಿಗಳು ನೀಡುವ ಪದಕ ಸೇರಿ ಒಟ್ಟು 30 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಸ್ನಾತಕೋತ್ತರ ಪದವಿಯಲ್ಲಿ 23 ವಿದ್ಯಾರ್ಥಿನಿಯರು, 5 ವಿದ್ಯಾರ್ಥಿಗಳು ಒಟ್ಟು 62 ಚಿನ್ನದ ಪದಕಗಳನ್ನು ಹಾಗೂ ಸ್ನಾತಕ ಪದವಿಯಲ್ಲಿ 13 ವಿದ್ಯಾರ್ಥಿನಿಯರು 6 ವಿದ್ಯಾರ್ಥಿಗಳು ಸೇರಿ ಒಟ್ಟು 58 ಚಿನ್ನದ ಪದಕ ಪಡೆದುಕೊಂಡರು.

ವಿವಿ ಹಾಗೂ ದಾನಿಗಳಿಂದ ನೀಡಲಾಗುವ ಒಟ್ಟು 150 ಚಿನ್ನದ ಪದಕಗಳನ್ನು 63 ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ವಿವಿಧ ವಿಭಾಗದಲ್ಲಿ ಮುಡಿಗೇರಿಸಿಕೊಂಡರು.

ಪಿಎಚ್‌ಡಿ ವಿಭಾಗ: ಪ್ರವಳಿಕ ಕೆ.ಎಂ. 4 ಚಿನ್ನದ ಪದಕ, ಮಾರೇಪಲ್ಲಿ ಉದಯ ಸಿಂಧು 3 ಚಿನ್ನದ ಪದಕ, ಸ್ಮರ್ತಿ ಶಂಕರ್ ಕೆ.ಎಸ್. 3 ಚಿನ್ನದ ಪದಕ. ಸ್ನಾತಕೋತ್ತರ ಪದವಿಯಲ್ಲಿ ಆರ್ತಿ ಆರ್ (ಕೃಷಿ ಅರ್ಥಶಾಸ್ತ್ರ) 5 ಚಿನ್ನದ ಪದಕ, ಬಿ.ಟೆಕ್. ಪದವಿಯಲ್ಲಿ (ಕೃಷಿ ಎಂಜಿನಿಯರಿಂಗ್) ಸಾಯಂತನ್ ಮೈತಿ 3 ಚಿನ್ನದ ಪದಕ ಪಡೆದಿದ್ದಾರೆ.

ಬಿಎಸ್ಸಿಯಲ್ಲಿ ದೀಪ್ತಿಗೆ 13 ಚಿನ್ನದ ಪದಕ



ನಮ್ಮದು ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕು ತಲಕಾಲಕೊಪ್ಪ ಚಿಕ್ಕಹಳ್ಳಿ, ತಂದೆ ಪ್ರೌಢಶಾಲಾ ಲಕ್ಷ್ಮೀಶ ಪ್ರೌಢ ಶಾಲಾ ಶಿಕ್ಷಕ, ತಾಯಿ ಭಾರತಿ ಗೃಹಿಣಿ. ಬಿಎಸ್ಸಿ ಕೃಷಿಯಲ್ಲಿ ಶೇ 92.60 ಅಂಕ ಸಾಧನೆ ಮಾಡಿದ್ದು ಇದೀಗ 13 ಚಿನ್ನದ ಪದಕ ಬಂದಿರುವುದು ಖುಷಿ ತಂದಿದೆ. ಸದ್ಯ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಸ್ನಾತಕ ತಳಿ ಮತ್ತು ಆನುವಂಶಿಯ ಶಾಸ್ತ್ರ ವಿಭಾಗದಲ್ಲಿ ಎಂಎಸ್ಸಿ ಪದವಿ ಪಡೆಯುತ್ತಿದ್ದೇನೆ. ಭವಿಷ್ಯದಲ್ಲಿ ಕೃಷಿ ವಿಜ್ಞಾನಿಯಾಗುವ ಕನಸು ಇದೆ ಎಂದು ದೀಪ್ತಿ ಟಿ.ಎಲ್. ತಿಳಿಸಿದ್ದಾರೆ.

ಬಿಎಸ್ಸಿಯಲ್ಲಿ ಯಕ್ಷಿತ್‌ಗೆ 3 ಚಿನ್ನದ ಪದಕ



ತಂದೆ ಮಾಜಿ ಸೈನಿಕರು ಆರ್‌ಬಿಐನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದಾರೆ. ಓದಿನ ಆರಂಭದಿಂದಲೂ ಕೃಷಿಯ ಬಗ್ಗೆ ಒಲವಿತ್ತು. ಹೀಗಾಗಿ ಕೃಷಿಯನ್ನೇ ಆಯ್ದುಕೊಂಡು ಸಾಧನೆ ಮಾಡಿದ್ದೇನೆ. ಸದ್ಯ ಭತ್ತೀಸ್‌ಗಡದಲ್ಲಿ ಕೀಟ ಶಾಸ್ತ್ರವಿಭಾಗದಲ್ಲಿ ಎಂ.ಎಸ್ಸಿಮಾಡುತ್ತಿದ್ದೇನೆ. ಇದರೊಟ್ಟಿಗೆ ಪ್ರಾಧ್ಯಾಪಕ ಮಲ್ಲಿಕಾರ್ಜುನ ಮಾರ್ಗದರ್ಶನದಲ್ಲಿ ಮೆಕ್ಕೆಜೋಳಕ್ಕೆ ಸಂಬಂಧಿಸಿದ ನ್ಯಾನೋ ಸಿಲಿಕಾ ಶಾಸ್ತ್ರದಲ್ಲಿ ತೊಡಗಿದ್ದೇನೆ. ಭವಿಷ್ಯದಲ್ಲಿ ಕೀಟ ಶಾಸ್ತ್ರದಲ್ಲಿ ವಿಜ್ಞಾನಿಯಾಗುವ ಕನಸಿದೆ ಎಂದು ಮಂಡ್ಯ ದಡದವರದ ಯಕ್ಷಿತ್ ಡಿ.ಎಸ್. ತಿಳಿಸಿದ್ದಾರೆ.

ಬಿಎಸ್ಸಿ ಕೃಷಿಯಲ್ಲಿ ಸ್ಫೂರ್ತಿಗೆ 9 ಚಿನ್ನದ ಪದಕ

ತಂದೆ ದ್ವಿಚಕ್ರ ವಾಹನ ಮೆಕ್ಯಾನಿಕ್, ತಾಯಿ ಗೃಹಿಣಿ. ಮನೆಯಲ್ಲಿಯಾರು ಕೃಷಿಕರಿಲ್ಲ ಆದರೂ ಕೃಷಿ ಪ್ರೇರಣೆ ಹೊಂದಿ ಈ ವಿಷಯ ಆಯ್ದುಕೊಂಡು ಸಾಧನೆ ಮಾಡಿರುವುದು ಖುಷಿ ಇದೆ. ಮುಂದೆ ಕೃಷಿ ವಿಜ್ಞಾನಿಯಾಗುವ ಬಯಕೆ ಇದೆ ಎಂದು ಬಿಎಸ್ಸಿ ಕೃಷಿಯಲ್ಲಿ 9 ಚಿನ್ನದ ಪದಕ ಪಡೆದ ಸ್ಫೂರ್ತಿ ಆರ್. ಮೈಸೂರು ಹೇಳಿದ್ದಾರೆ.

Udayavani pg 05

1,271 candidates graduate from UAS-Bangalore at 59th convocation

The Hindu Bureau
BENGALURU

A total of 1,271 candidates were conferred with bachelors, masters and doctoral degrees, with over 150 gold medals to 63 students during the 59th convocation ceremony of the University of Agricultural Sciences (UAS)-Bangalore was held on Thursday.



Toppers at the convocation ceremony of the University of Agricultural Sciences in Bengaluru on Thursday.

Speaking on occasion, U.S. Awasthi, Managing Director, IFFCO, New Delhi said, "In India over, 90% of the soil across 27 States is deficient in nitrogen, 85% lack sufficient organic carbon and significant proportions are deficient in phosphorus, potassium, boron, zink, iron and sulphur. These deficiencies contribute to widespread malnutrition with nearly one-third stunted and high rate of anaemia among children and women."

He said that the indiscriminate use of agro-chemicals has caused the accumulation of toxic residues and heavy metals.

"Healthy soil, which once teemed with life, is now losing its fertility, productivity and resilience," he added.

"Decades of overuse of chemical fertilizers and pesticides have led to a sharp decline in soil organic matters. Modern farming practices often rely heavily on synthetic inputs, leading to residues in the final produce. These residues not only pose health risks to consumers, but also affect the export potential of agricultural commodities due to stringent international safety standards," Mr. Awasthi added.

Speaking about adopting technology in farming, he said traditional farming has been based on age old practices, depending heavily on farmer's experience and the natural forces around them. Today our population is growing, natural resources are shrinking and climate change is knocking at our door.

"With the help of AI, images from drones and cameras are analysed autochorically to detect early signs of stress in plants. Tiny devices placed in the soil or on plants constantly measure moisture, nutrient levels and temperature. This means farmers know exactly when it water the crops, how much fertilizer is needed and when to harvest with precision," he explained.

Thawarchand Gehlot, Governor of Karnataka and Chancellor of the university said, "Currently we are facing challenges like global warming, water crisis, soil degradation, overuse of pesticides and financial distress of farmers. In such a situation, the role of agriculture graduates, agricultural scientists, innovators and policy makers is more important. India is at the forefront in adopting technological innovations in the agricultural sector. There is a need to promote new options to meet the current demand for agricultural production. More work is needed in vertical farming technology to produce more yield in less land."

N. Cheluvarayaswamy, Minister of Agriculture, and Pro-Chancellor of the university said that the State government has emphasised integrated farming, food parks, AI-based digital farming, redelineation of agro-climatic zones in the recent state budget.

"Subsidy of 90% for micro-irregation, utilization of agricultural wastes for soil health enhancement, utilization of geo-spatial technologies for agriculture is also in priority this year," he added.

Hindu pg 03

ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಯು.ಎಸ್. ಅವಸ್ಥಿ

ಕೃಷಿಗೆ ಹವಾಮಾನದ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷೀಣಿಸುತ್ತಿರುವ ನೈಸರ್ಗಿಕ ಸಂಪತ್ತು, ಏರುತ್ತಿರುವ ಉತ್ಪಾದನಾ ವೆಚ್ಚ ಮತ್ತು ಅನಿಶ್ಚಿತ ಹವಾಮಾನವು ಕೃಷಿಗೆ ದೊಡ್ಡ ಸವಾಲುಗಳು ಎಂದು ನವದೆಹಲಿಯ ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಯು.ಎಸ್.ಅವಸ್ಥಿ ಹೇಳಿದರು.

ಗುರುವಾರ ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಕೃಷಿ ಅಂದರೆ ಆಹಾರ ಉತ್ಪಾದನೆ ಯಷ್ಟೇ ಅಲ್ಲ. ನಮ್ಮ ಆರ್ಥಿಕತೆಯ ಬೆನ್ನೆಲುಬು, ಗ್ರಾಮೀಣ ಸಮುದಾಯಗಳ ಹೃದಯದ ಬಡಿತ, ಪರಿಸರ ಸಮತೋಲನದ ಮೂಲಾಧಾರ. ಆಗಾಗ ಉಂಟಾಗುವ ಬರಗಾಲ, ಪ್ರವಾಹ, ತೀವ್ರ ತಾಪಮಾನಗಳು ಕೃಷಿಕರಿಗೆ ಸಂಕಷ್ಟ ಗಳನ್ನು ತಂದೊಡ್ಡುತ್ತಿವೆ. ಹವಾಮಾನ ವೈಪರೀತ್ಯಗಳು ಬೆಳೆ ಅಭಿವೃದ್ಧಿಗೆ ತಡೆಯೊಡ್ಡುವುದಲ್ಲದೇ ಬೆಳೆಗಳಿಗೆ ಕೀಟ, ರೋಗ ಬಾಧೆಗಳನ್ನೂ ಹೆಚ್ಚಿಸುತ್ತಿದೆ' ಎಂದು ವಿಶ್ಲೇಷಿಸಿದರು.

ಮಣ್ಣು, ನೀರು, ಗಾಳಿಯಂಥ ಪ್ರಮುಖ ಸಂಪನ್ಮೂಲಗಳು ಆಪಾಯದಲ್ಲಿವೆ. ಸುಸ್ಥಿರವಲ್ಲದ ಭೂ ಬಳಕೆ ಪದ್ಧತಿ, ಮಣ್ಣಿನ ಸವಕಳಿ, ಪೋಷಕಾಂಶಗಳ ಗಣಿಗಾರಿಕೆ, ಸಾವಯವ ವಸ್ತುಗಳ ನಷ್ಟವು ಮಣ್ಣಿನ ಆರೋಗ್ಯಕ್ಕೆ ಕಾರಣವಾಗುತ್ತಿದೆ. ಜೊತೆಗೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯೂ ಮಣ್ಣಿನ ಫಲವಂತಿಕೆಯನ್ನು ಹಾಳು ಮಾಡುತ್ತಿದೆ. ಕೃಷಿ ಗೊಬ್ಬರ ಬಳಸುವುದನ್ನು ಕಡಿಮೆ ಮಾಡಬೇಕು. ಕೃಷಿ ವಿಶ್ವವಿದ್ಯಾಲಯ ಗುರುವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ವಿ. ಬಾಲಸುಬ್ರಮಣಿಯನ್ ಹಾಗೂ ಯೋಗೇಂದ್ರ ಕುಮಾರ್ ಅವರಿಗೆ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು. ಸಚಿವ ಎನ್.ಚಲುವರಾಯಸ್ವಾಮಿ, ಯು.ಎಸ್. ಅವಸ್ಥಿ ಹಾಗೂ ಕುಲಪತಿ ಎಸ್.ವಿ. ಸುರೇಶ ಹಾಜರಿದ್ದರು

ಪ್ರಜಾವಾಣಿ ಚಿತ್ರ

ನೈಸರ್ಗಿಕವಾಗಿ ವೇಗವಾಗಿ ಬೆಳೆ ಪಡೆಯುವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಹೊಸ ತಂತ್ರಜ್ಞಾನ ಗಳನ್ನು ಅಳವಡಿಸಿಕೊಂಡು ನಿಖರ ಕೃಷಿ ಮಾಡಬೇಕು. ಅದು ಉತ್ಪಾದನೆ ಮತ್ತು ಆದಾಯವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ರಾಸಾಯನಿಕ, ಕೀಟನಾಶಕಗಳ ಬಳಕೆ ಕಡಿಮೆ ಮಾಡಿ ಮಣ್ಣಿನ ಗುಣಮಟ್ಟವನ್ನು ಕಾಪಾಡಿ ಕೊಳ್ಳಬೇಕು. ಇಂದು ಪದವಿ ಪಡೆದಿರುವ ಅಭ್ಯರ್ಥಿಗಳು ಕೃಷಿಯನ್ನು ಸುಸ್ಥಿರ ವನ್ನಾಗಿಸಿ, ಲಾಭದಾಯಕ ವಾಗಿಸಲು ಬೇಕಾದ ಸಂಶೋಧನೆ ಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಮಾತನಾಡಿ, 'ಹಸಿರು ಕ್ರಾಂತಿಯಿಂದಾಗಿ ರಾಜ್ಯದಲ್ಲಿಯಾ ಆಹಾರ ಧಾನ್ಯಗಳ ಉತ್ಪಾದನೆ ಯಲ್ಲಿ ಸುಸ್ಥಿರತೆ ಸಾಧಿಸಲಾಯಿತು. ಸಮಗ್ರ ಕೃಷಿ ಪದ್ಧತಿ, ಉತ್ತಮ ತಳಿ, ಒಣಬೇಸಾಯ ತಾಂತ್ರಿಕತೆ, ಸುಸ್ಥಿರ ನೀರು, ಪೋಷಕಾಂಶ, ಕಳೆ ನಿರ್ವಹಣೆ, ರೋಗ, ಕೀಟ ನಿರ್ವಹಣೆ ಪದ್ಧತಿಗಳು, ಕೃಷಿ ಯಾಂತ್ರೀಕರಣ, ಪರ್ಯಾಯ ಭೂ ಬಳಕೆ ಹೀಗೆ ಅನೇಕ ವಿಷಯಗಳಲ್ಲಿ ಸಾಧನೆ ಮಾಡಿದೆ' ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಕುಲಪತಿ ಎಸ್.ವಿ. ಸುರೇಶ ಉಪಸ್ಥಿತರಿದ್ದರು.



ಕೃಷಿ ವಿಶ್ವವಿದ್ಯಾಲಯ ಗುರುವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ವಿ. ಬಾಲಸುಬ್ರಮಣಿಯನ್ ಹಾಗೂ ಯೋಗೇಂದ್ರ ಕುಮಾರ್ ಅವರಿಗೆ ಥಾವರಚಂದ್ ಗೆಹಲೋತ್ ಅವರು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು. ಸಚಿವ ಎನ್.ಚಲುವರಾಯಸ್ವಾಮಿ, ಯು.ಎಸ್. ಅವಸ್ಥಿ ಹಾಗೂ ಕುಲಪತಿ ಎಸ್.ವಿ. ಸುರೇಶ ಹಾಜರಿದ್ದರು

ಪ್ರಜಾವಾಣಿ ಚಿತ್ರ

ಪದಕಗಳು

ಬಿ.ಎಸ್ಸಿ(ಆನರ್ಸ್) ಕೃಷಿ	
ದೀಪ್ತಿ ಟಿ.ಎಲ್	13
ಸುಸ್ಥಿರ ಆರ್.	9
ಯಕ್ಷಿತ್ ಡಿ.ಎಸ್	3

ಸಾಧ್ವಿಯ ಗಣಪತಿ ಗೌದ, ಬಿ.ಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ	7
ಒ.ಗಣೇಶ, ಬಿ.ಎಸ್ಸಿ (ಆನರ್ಸ್) ರೇಷ್ಮೆ ಕೃಷಿ	1

ಬಿ.ಟೆಕ್ ಪದವಿ	
ಸಾಯಂತನ್ ಮೈತಿ, ಕೃಷಿ ಎಂಜಿನಿಯರಿಂಗ್	3
ರಮ್ಯಶ್ರೀ ಎನ್.ಸಿ., ಜೈವಿಕ ತಂತ್ರಜ್ಞಾನ	2
ನೋಮ ಸಿ.ಎ., ಆಹಾರ ತಂತ್ರಜ್ಞಾನ	1

ಸ್ನಾತಕೋತ್ತರ ಪದವಿ (ಎಂ.ಎಸ್ಸಿ)	
ಆರ್ತಿ ಆರ್., ಕೃಷಿ ಅರ್ಥಶಾಸ್ತ್ರ	5
ಹರ

'ಚಿನ್ನ'ದ ಮಕ್ಕಳ ಕಣ್ಣಲ್ಲಿ ಸಾಧನೆ ಹೊಳಪು

ಪ್ರಜಾವಾಣಿ ವಾರ್ತೆ

ಯಲಹಂಕ (ಬೆಂಗಳೂರು): ಜಿಕೆವಿಕೆಯಲ್ಲಿ ಗುರುವಾರ ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಕಣ್ಣಲ್ಲಿ ಸಾಧನೆಯ ಹೊಳಪು, ಭವಿಷ್ಯದಲ್ಲಿ ಕನಸನ್ನು ನನಸು ಮಾಡುವ ಹುರುಪು ಕಂಡು ಬಂತು.

ಕೃಷಿ ವಿಜ್ಞಾನಿಯಾಗುವೆ: 'ಕೃಷಿ ಕ್ಷೇತ್ರದಲ್ಲಿ ಆಸಕ್ತಿಯಿದ್ದಿದ್ದರಿಂದ ಕೃಷಿಯಲ್ಲಿ ಅಧ್ಯಯನ ಆರಂಭಿಸಿದೆ. ಕುಟುಂಬ ಅಡಿಕೆ ಕೃಷಿ ಮಾಡುತ್ತಿದ್ದು, ಭವಿಷ್ಯದಲ್ಲಿ ಕೃಷಿವಿಜ್ಞಾನಿಯಾಗಿ ಸಂಶೋಧನೆಯಲ್ಲಿ ತೊಡಗಬೇಕೆಂಬ ಗುರಿ ಹೊಂದಿದ್ದೇನೆ' ಬಿಎಸ್‌ಸಿ(ಆನರ್ಸ್) ಕೃಷಿಯಲ್ಲಿ ಒಟ್ಟು 13 ಚಿನ್ನದ ಪದಕ ಪಡೆದ ಟಿ.ಎಲ್. ದೀಪ್ತಿಯ ಮಾತುಗಳಿವು.

ತಂದೆ-ತಾಯಿಯ ಸಹಕಾರ, ಶಿಕ್ಷಕರ ಮಾರ್ಗದರ್ಶನ ಹಾಗೂ ಕಠಿಣ ಪರಿಶ್ರಮದಿಂದ ಹೆಚ್ಚಿನ ಚಿನ್ನದ ಪದಕಗಳನ್ನು ಪಡೆಯಲು ಸಾಧ್ಯವಾಯಿತು ಎಂದು ಅವರು ತಿಳಿಸಿದರು.

ದೀಪ್ತಿ, ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ ತಲಕಾಲಕೊಪ್ಪ ಗ್ರಾಮದ ಶಿಕ್ಷಕ ಲಕ್ಷ್ಮೀಶ್ ಅವರ ಪುತ್ರಿ.

ಪ್ರಸ್ತುತ ನವದೆಹಲಿಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಸಸ್ಯತಳಿ ಮತ್ತು ಅನುವಂಶೀಯ ವಿಭಾಗದಲ್ಲಿ ಎಂ.ಎಸ್‌ಸಿ ಪದವಿ ಅಧ್ಯಯನ ಮಾಡುತ್ತಿದ್ದಾರೆ.

ಹಳ್ಳಿಯಲ್ಲಿ ಸ್ವಂತ ಉದ್ದಿಮೆಯ ಕನಸು: 'ವ್ಯವಸಾಯವನ್ನು ನೋಡುತ್ತ ಬೆಳೆದಿರುವುದರಿಂದ ಕೃಷಿಯ ಮೇಲೆ ಆಸಕ್ತಿಹೊಂದಿ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರಿದೆ' ಎಂದು ಬಿಎಸ್‌ಸಿ ಕೃಷಿ ವ್ಯವಹಾರ ನಿರ್ವಹಣೆ ವಿಭಾಗದಲ್ಲಿ 7 ಚಿನ್ನದ ಪದಕಗಳನ್ನು ಪಡೆದ ಐಶ್ವರ್ಯ ಗಣಪತಿಗೌಡ ತಿಳಿಸಿದರು.



ಟಿ.ಎಲ್.ದೀಪ್ತಿ



ಐಶ್ವರ್ಯ

ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕಿನ ಅಂಡಗಿ ಗ್ರಾಮದ ಐಶ್ವರ್ಯ ಅವರು, ಕೃಷಿ ಕುಟುಂಬದ ಹಿನ್ನೆಲೆಯವರು. 14 ಎಕರೆ ಜಮೀನಿನಲ್ಲಿ ಭತ್ತ, ಅಡಿಕೆ, ಬಾಳೆ ಮತ್ತು ಶುಂಠಿ ಕೃಷಿಯಲ್ಲಿ ಅವರ ಕುಟುಂಬವು ತೊಡಗಿಸಿಕೊಂಡಿದೆ.

'ತಂದೆ-ತಾಯಿ ಮತ್ತು ಅಜ್ಜನ ಸಹಕಾರದಿಂದ ಚಿನ್ನದ ಪದಕಗಳನ್ನು ಪಡೆಯಲು ಸಾಧ್ಯವಾಯಿತು. ಬ್ಯಾಂಕ್ ಪರೀಕ್ಷೆ, ಸಿ-ಮ್ಯಾಟ್, ಎಂಬಿಎ ಮಾಡಬೇಕೆಂಬ ಆಸೆಯಿದೆ. ಮುಂದೆ ಹಳ್ಳಿಯಲ್ಲಿಯೆ ಸ್ವಂತ ಉದ್ದಿಮೆ ಆರಂಭಿಸಿ, ಹಲವು ಮಂದಿಗೆ ಉದ್ಯೋಗ ನೀಡ ಬೇಕು ಎಂಬುದು ನನ್ನ ಕನಸು' ಎಂದು ಹೇಳಿದರು.

ಚಿನ್ನದ ಪದಕ ಅಮ್ಮನ ಆಸೆ



ಸ್ಫೂರ್ತಿ ಆರ್.

ತಂದೆ ದ್ವಿಚಕ್ರ ವಾಹನದ ಮೆಕ್ಯಾನಿಕ್, ತಾಯಿ ಗೃಹಿಣಿ. ಮಗಳಿಗೆ ಬಿ.ಎಸ್‌ಸಿ ಕೃಷಿಯಲ್ಲಿ 9 ಚಿನ್ನದ ಪದಕ.

ಇಂಥ ಸಾಧನೆ ಮಾಡಿದವರು ಮೈಸೂರಿನ ರವೀಂದ್ರ ಕುಮಾರ್ ಹಾಗೂ ಮಂಜುಳಾ ದಂಪತಿಯ ಮಗಳು ಸ್ಫೂರ್ತಿ ಆರ್.

'ನಾನು ದೊಡ್ಡ ವೇದಿಕೆಯಲ್ಲಿ ಎಲ್ಲರ ಮುಂದೆ ಪದಕ ಪಡೆಯಬೇಕೆಂಬುದು ನನ್ನ ಅಮ್ಮನ ಆಸೆಯಾಗಿತ್ತು. ನಾನು ಕೃಷಿಯಲ್ಲಿ ಅಧ್ಯಯನ ಮಾಡಬೇಕು ಎಂಬುದು ತಂದೆಯ ಬಯಕೆಯೂ ಆಗಿತ್ತು. ಇಂದು ಅದು ನಿಜವಾಗಿದೆ' ಎಂದು ಸ್ಫೂರ್ತಿ ಭಾವುಕಳಾಗಿ ನುಡಿದರು.

ಮಂಡ್ಯದಲ್ಲಿ ಬಿಎಸ್‌ಸಿ ಕೃಷಿ ಪದವಿ ಪಡೆದ ಸ್ಫೂರ್ತಿ, ರಾಂಚಿಯ ಐಐಎಬಿ ಸಂಸ್ಥೆಯಲ್ಲಿ(ಜೆಆರ್‌ಎಫ್) ಸಸ್ಯತಳಿ ಮತ್ತು ಅನುವಂಶೀಯ ಶಾಸ್ತ್ರ ವಿಭಾಗದಲ್ಲಿ ಎಂಎಸ್‌ಸಿ ಪದವಿ ಮಾಡುತ್ತಿದ್ದಾರೆ. ಮುಂದೆ ಕೃಷಿ ವಿಜ್ಞಾನಿಯಾಗುವ ಕನಸು ಕಂಡಿದ್ದಾರೆ.

Udayavani pg 06

ಸುಧಾರಿತ ಬೀಜ, ತಳಿಗಳಿಂದ ರೈತರಿಗೆ ಲಾಭ | ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಸಲಹೆ

ಕೃಷಿ ಕ್ಷೇತ್ರದ ಅಭಿವೃದ್ಧಿಗೆ ವಿವಿಗಳು ಪಾಲುದಾರರಾಗಿ

•ಬೆಂಗಳೂರು: ಯುವ ಜನತೆ ಸ್ಟಾರ್ಟ್ ಅಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತದಂತಹ ಯೋಜನೆಗಳ ಸದುಪಯೋಗ ಪಡಿಸಿಕೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹೇಳಿದರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಮಾತನಾಡಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸಿದ ಸುಧಾರಿತ ಬೀಜಗಳು ಮತ್ತು ಸುಧಾರಿತ ತಳಿಗಳು ರೈತರ ಆದಾಯವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಕೃಷಿ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನ ಆಳವಡಿಸಿಕೊಳ್ಳಬೇಕು. ಡ್ರೋನ್ ತಂತ್ರಜ್ಞಾನ, ಉಪಗ್ರಹ ಚಿತ್ರಣ ಮತ್ತು ಸ್ಮಾರ್ಟ್ ನೀರಾವರಿ ವ್ಯವಸ್ಥೆಗಳ ಬಳಕೆಯು ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ನೀರಿನ ಬಳಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದರು. ಪ್ರಸ್ತುತ ನಾವು ಜಾಗತಿಕ ತಾಪಮಾನ, ನೀರಿನ ಬಿಕ್ಕಟ್ಟು, ಮಣ್ಣಿನ ಅವನತಿ, ಕೀಟನಾಶಕಗಳ ಅತಿಯಾದ ಬಳಕೆ ಮತ್ತು ರೈತರ ಆರ್ಥಿಕ ತೊಂದರೆಗಳಂತಹ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಪದವಿ ಪಡೆದ ವಿದ್ಯಾರ್ಥಿಗಳು, ಕೃಷಿ ವಿಜ್ಞಾನಿಗಳು, ನೀತಿ ನಿರೂಪಕರ ಪಾತ್ರವು ಹೆಚ್ಚು ಮುಖ್ಯವಾಗಿದೆ. ಕಡಿಮೆ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡಲು ಲಂಬ ಕೃಷಿ ತಂತ್ರಜ್ಞಾನದಲ್ಲಿ ಹೆಚ್ಚಿನ ಕೆಲಸ ಆಗತ್ಯವಿದೆ ಎಂದು ಅಭಿಪ್ರಾಯ ಪಟ್ಟರು.



ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಮೇಲೆ ರೈತರ ಅವಲಂಬನೆಯನ್ನು ಕಡಿಮೆ ಮಾಡುವ ಅವಶ್ಯಕತೆಯಿದೆ. ಕೃಷಿ ಆಧಾರಿತ ಸ್ಟಾರ್ಟ್‌ಅಪ್ ಗಳು ಭಾರತದ ಆರ್ಥಿಕತೆಯನ್ನು ಕ್ರಾಂತಿಗೊಳಿಸಬಲ್ಲವು. ರೈತರ ಜೀವನವನ್ನು ಸುಧಾರಿಸುವಲ್ಲಿ ಮತ್ತು ಆಹಾರ ಮತ್ತು ಕೃಷಿ ಉತ್ಪಾದನೆ ಹಾಗೂ ತಂತ್ರಜ್ಞಾನ, ನಾವೀನ್ಯತೆ ಮತ್ತು ನೀತಿಗಳಿಗೆ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡುವಲ್ಲಿ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಅತಿಯಾಗಿ ರಾಸಾಯನಿಕ , ಕೀಟನಾಶಕ ಬಳಸಬೇಡಿ

ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣು, ನೀರು ಮತ್ತು ಆಹಾರವನ್ನು ಕಲುಷಿತಗೊಳಿಸುತ್ತಿದೆ ಮತ್ತು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಸಾವಯವ ಕೃಷಿ, ನೈಸರ್ಗಿಕ ಕೃಷಿ, ಕಡಿಮೆ ನೀರಿನಿಂದ ಹೆಚ್ಚಿನ ಇಳುವರಿ ಮತ್ತು ಸುರಕ್ಷಿತ ಆಹಾರವನ್ನು ಉತ್ಪಾದಿಸಲು ಪರಿಸರ ಸ್ನೇಹಿ ಕೃಷಿಯಂತಹ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಕ್ಷೇತ್ರದಲ್ಲಿ ನಾವು ಕೆಲಸ ಮಾಡಬೇಕಾಗಿದೆ.ಇದರಿಂದಾಗಿ ಕೃಷಿ ಉತ್ಪಾದನೆಯು ಶುದ್ಧೀಕರಣಗೊಳ್ಳುತ್ತದೆ ಮತ್ತು ಉತ್ಪಾದನೆಯು ಹೆಚ್ಚಾಗುತ್ತದೆ ಜೊತೆಗೆ ಪರಿಸರ ಸಂರಕ್ಷಣೆಗೆ ಸಹಾಯ ಮಾಡುತ್ತದೆ ಎಂದು ರಾಜ್ಯಪಾಲರು ಹೇಳಿದರು.

ಬೆಂಗಳೂರು ಕೃಷಿ ವಿವಿ 59ನೇ ಘಟಿಕೋತ್ಸವ | ಇಬ್ಬರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ

ಚಿನ್ನದ ನಗೆ ಬೀರಿದ ವಿದ್ಯಾರ್ಥಿನಿಯರು

■ ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ರೇಷ್ಮೆ ಕೃಷಿ, ಆಡಳಿತ ಸುಧಾರಣೆ, ಗ್ರಾಮೀಣಾಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಮತ್ತು ನ್ಯಾನೊ ರಸಗೊಬ್ಬರಗಳ ನಾವೀನ್ಯತೆ ಮತ್ತು ಕೃಷಿ ಸಮುದಾಯಕ್ಕೆ ಸೇವೆ ಸಲ್ಲಿಸಿದ ಇಫ್ಕೊ ಸಂಸ್ಥೆಯ ಮಾರ್ಕೆಟಿಂಗ್ ನಿರ್ದೇಶಕ ಯೋಗೇಂದ್ರಕುಮಾರ್ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಮತ್ತು ಇಫ್ಕೊ ಸಂಸ್ಥೆಯ ಮಾರ್ಕೆಟಿಂಗ್ ನಿರ್ದೇಶಕ ಯೋಗೇಂದ್ರ ಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.



ಪದವಿ ಪಡೆದಿರುವ ಅಭ್ಯರ್ಥಿಗಳು ಸಂಶೋಧನೆಗಳನ್ನು ಕೈಗೊಂಡು ಕಡಿಮೆ ವೆಚ್ಚದಲ್ಲಿ ಕೃಷಿಗೆ ಉಪಯುಕ್ತವಾದ ಯಂತ್ರೋಪಕರಣಗಳನ್ನು ತಯಾರಿಸುವತ್ತ ಗಮನ ಹರಿಸಬೇಕು.
-ಥಾವರ್‌ಚಂದ್ ಗೆಹ್ಲೋಟ್
ರಾಜ್ಯಪಾಲ

ಅತಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಯರ ಸಂಭ್ರಮ.

ಬಿ.ಎಸ್ಸಿ (ಆನರ್ಸ್) ಕೃಷಿ ಪದವಿಯಲ್ಲಿ ಹುಡುಗಿಯರೇ ಮೇಲುಗೈ ಸಾಧಿಸಿದ್ದು, ಮೊದಲ ಎರಡು ಸ್ಥಾನಗಳನ್ನು ಪಡೆದು ಕೊಂಡಿದ್ದಾರೆ. ಶಿವಮೊಗ್ಗದ ತಲಕಾಲ ಕೊಪ್ಪದ ವಿದ್ಯಾರ್ಥಿನಿ ದೀಪ್ತಿ ಟಿ.ಎಲ್. ಅತಿ ಹೆಚ್ಚು 13 ಚಿನ್ನದ ಪದಕಗಳು, ಮೈಸೂರಿನ ಸ್ಫೂರ್ತಿ ಆರ್. 9 ಚಿನ್ನದ ಪದಕ ಪಡೆಯುವ ಮೂಲಕ ಚಿನ್ನದ ಹುಡುಗಿಯರಾಗಿ ಹೊರಹೊಮ್ಮಿದರು. ಅದೇ ರೀತಿ ಬಿಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ ಪದವಿಯಲ್ಲಿ ಶಿರಸಿ ಮೂಲದ ಐಶ್ವರ್ಯ ಗೌಡ 7 ಚಿನ್ನದ ಪದಕಗಳನ್ನು ಪಡೆದು ಮಿಂಚಿದರು.

ಇನ್ನು ಸ್ನಾತಕೋತ್ತರ ವಿಭಾಗದ ಕೃಷಿ ಅರ್ಥಶಾಸ್ತ್ರ ಪದವಿಯಲ್ಲಿ ಆರತಿ ಆರ್. (5), ಬೇಸಾಯ ಶಾಸ್ತ್ರದಲ್ಲಿ ಹರ್ಷಿತಾ ಕೆ. (3), ಕೃಷಿ ಸಂಖ್ಯಾಶಾಸ್ತ್ರದಲ್ಲಿ ಸುಕನ್ಯಾ ರಾಣೇಬೆನ್ನೂರ (3), ಆನ್ವಯಿಕ ಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಮೇಘನಾ ಎಸ್.ಎನ್.(3), ಅನುವಂಶೀಯ ಮತ್ತು ಸಸ್ಯತಳಿ ಅಭಿವೃದ್ಧಿ ಶಾಸ್ತ್ರದಲ್ಲಿ ಪ್ರಿಯಾಂಕಾ ಸಿ.ಎನ್.(2) ಚಿನ್ನದ ಪದಕಗಳನ್ನು ಪಡೆದುಕೊಂಡರು. ಡಾಕ್ಟರ್ ಆಫ್ ಫಿಲಾಸಫಿಯ ಬೇಸಾಯಶಾಸ್ತ್ರ ವಿಭಾಗದಲ್ಲಿ ಪ್ರವಳಿಕ ಕೆ.ಎಂ. (4), ಕೃಷಿ ವಿಸ್ತರಣೆಯಲ್ಲಿ ಮಾರೇಪಲ್ಲಿ ಉದಯ ಸಿಂಧು (3) ಹಾಗೂ ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನಶಾಸ್ತ್ರದಲ್ಲಿ ಸ್ಫೂರ್ತಿ ಶಂಕರ್ ಕೆ.ಎಸ್. (3) ಪದಕಗಳನ್ನು ಪಡೆಯುವ ಮೂಲಕ ಚಿನ್ನದ ನಗೆ ಬೀರಿದರು.

ಡಿಜಿಟಲ್ ಕೃಷಿ ತಾಂತ್ರಿಕತೆಗೆ ಒತ್ತು: ಅತಿಥಿಯಾಗಿ ಆಗಮಿಸಿದ್ದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ''ಪ್ರಸಕ್ತ ಸಾಲಿನಲ್ಲಿ ರೈತರಿಗೆ ಸಮಯಾಧಾರಿತ ಕೃಷಿಗೆ ಸಂಬಂಧಿಸಿದ ರೋಗ ಮತ್ತು ಕೀಟ ಹತೋಟಿ ಕ್ರಮಗಳ ಸಲಹೆ ನೀಡಲು ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ,'' ಎಂದರು.

''ರಾಜ್ಯ ಸರಕಾರ ಸಮಗ್ರ ಕೃಷಿ ಆಹಾರ ಪಾರ್ಕ್‌ಗಳ ಸ್ಥಾಪನೆ, ಕೃತಕ ಬುದ್ಧಿಮತ್ತೆಯೊಂದಿಗೆ ಡಿಜಿಟಲ್ ಕೃಷಿ ತಾಂತ್ರಿಕತೆಗೆ ಹೆಚ್ಚಿನ ಒತ್ತು ನೀಡಿದೆ. ಈ ವರ್ಷ ನೀರಿನ ಸದ್ಬಳಕೆ ದೃಷ್ಟಿಯಿಂದ ರಾಜ್ಯ ಸರಕಾರ ಹನಿ ನೀರಾವರಿ ಕೈಗೊಳ್ಳುವ ರೈತರಿಗೆ ಶೇ. 90ರಷ್ಟು ಸಬ್ಸಿಡಿ ನೀಡಲಿದೆ. ಮಣ್ಣಿನ ಆರೋಗ್ಯಕ್ಕೆ ಕೃಷಿ ತ್ಯಾಜ್ಯಗಳ ಬಳಕೆ, ಕೃಷಿಯಲ್ಲಿ ಆಂತರಿಕ್ಷ ಆಧಾರಿತ ತಾಂತ್ರಿಕತೆಗೆ ಉತ್ತೇಜನ ನೀಡಲಾಗುವುದು,'' ಎಂದರು.

ಹೊಸದಿಲ್ಲಿಯ ಇಫ್ಕೊ ವ್ಯವಸ್ಥಾಪಕ ನಿರ್ದೇಶಕ ಡಾ. ಯು.ಎಸ್ ಅವಸ್ಥಿ ಮಾತನಾಡಿ, ''ಕೃಷಿಯ ಭವಿಷ್ಯ ಕೇವಲ ವಿಜ್ಞಾನಿಗಳು ಮತ್ತು ನೀತಿ ನಿರೂಪಕರ ಕೈಯಲ್ಲಿಲ್ಲ, ಬದಲಾಗಿ ಜ್ಞಾನ, ಕೌಶಲ್ಯ ಮತ್ತು ವಿಚಾರಿಸುವ ಮನೋಭಾವದ ಯುವ ಸಮುದಾಯದ ಉತ್ಸಾಹ ಮತ್ತು ನಾವೀನ್ಯತೆಯಲ್ಲಿ ಅಡಗಿದೆ,'' ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್ ಉಪಸ್ಥಿತರಿದ್ದರು.

V-karnataka pg 05